ಅಧ್ಯಕ್ಷರು. ಪ್ರಶ್ನೋತ್ತರದಲ್ಲಿ ವಿವರಣೆ ಬೇಡ. ತಾವು ಪ್ರಶ್ನೆ ಮಾತ್ರ ಕೇಳಿ.

ಶ್ರೀ ಭೀಮಣ್ಣ ಖಂಡ್ರೆ. ಟೆಂಡರ್ ಕಾಂಪ್ಲೀಟ್ ಮಾಡಿಲ್ಲ. ಬಂದು ವರ್ಷವಾದರೂ ಕೆಲಸ ಕಾರ್ಯಗಳು ನಡೆದಿಲ್ಲ. ಈ ಜಿಲ್ಲೆ ರಾಜಧಾನಿಯಿಂದ ದೂರದಲ್ಲಿದೆ ಬಹಳ ಹಿಂದುಳಿದಿದೆ. ಆದುದರಿಂದ ವಿಷಮತೆ ದೂರ ಮಾಡುತ್ತೇನೆಂದು ನೀವು ಹೇಳಿದ ಮೇಲೂ ಕೂಡ ಈ ತಾರತಮ್ಯ ಮಾಡುತ್ತಿದ್ದೀರಿ. ಈ ಜಿಲ್ಲೆಯನ್ನು ಹಿಂದೆಯೇ ಇಟ್ಟಿರುವ ಲತಾಯಿ ಧೋರಣೆಯನ್ನು ತೋರಿಸುತ್ತಿದ್ದೀರಿ ಎಂದು ನಾನು ಹೇಳುತ್ತೇನೆ. ಐದು ಕೋಟಿ ರೂಪಾಯಿಗಳನ್ನು ಈ ಸಾಲಿನಲ್ಲಿ ಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದನ್ನು ನೀವು ಹೇಳುತ್ತಿಲ್ಲ.

Mr Speaker.—Mr Khandre, you can't take away the question hour like this.

ಶ್ರೀ ಹೆಚ್. ಡಿ. ದೇವೇಗೌಡ — ಈ ಟೆಂಡರ್ ಸರ್ಕಾರದ ಪರಿಶೀಲನೆಯಲ್ಲಿದೆ. ಬಹುಶಃ ಇನ್ನೊಂದು ವಾರದಲ್ಲಿ ಆರ್ಡರ್ ಇಷ್ಯೂ ಮಾಡಬಹುದು. ಎಂದು ನಾನು ನಿರೀಕ್ಷಣೆ ಮಾಡಿದ್ದೇನೆ. ಇದರ ಜೊತೆಗೆ ಈ ವರ್ಷದ ಬಜೆಟ್ ಅಲೊಕೇಷನ್‌ಗಿಂತ 50 ಲಕ್ಷ ರೂಪಾಯಿ ಹೆಚ್ಚು ಖರ್ಚು ಮಾಡಬಹುದು ಎನ್ನುವ ಆಸೆ ನಾನು ಇಟ್ಟುಕೊಂಡಿದ್ದೇನೆ. ಅಷ್ಟಕ್ಕೆ ಸರ್ಕಾರಕ್ಕೆ ಈ ಭಾಗ ಆ ಭಾಗ ಎನ್ನುವ ತಾರತಮ್ಯ ಇಲ್ಲ. ಎಲ್ಲ ಕಡೆಯಲ್ಲೂ ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಎಲ್ಲವನ್ನೂ ಒಂದೇ ಸಮ ನೋಡಿಕೊಳ್ಳುತ್ತಕ್ಕ ಜವಾಬ್ದಾರಿ ಸರಕಾರದ ಮೇಲೆ ಇದೆ. ಆದರೆ ಹಣದ ಕೊರತೆಯಿಂದ ಈ ರೀತಿ ಆಗಿದೆ. ಆದುದರಿಂದಾಗಿ ಗೊತ್ತಿದೆ ಮುಂದಿನ ವರ್ಷ ನಮ್ಮ ಪರಿಸ್ಥಿತಿ ನೋಡಿಕೊಂಡು ಹೆಚ್ಚು ಹಣವನ್ನು ಒದಗಿಸುತ್ತೇವೆ

ವಿಷಯ : ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ.

ಪ್ರಶ್ನೆ : 186 (627) ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) 1984ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ನೀರಾವರಿ ಯೋಜನೆಗಳಿಗೆ ಆಯವ್ಯಯದಲ್ಲಿ ಎಷ್ಟೆಷ್ಟು ಹಣ ಒದಗಿಸಲಾಗಿದೆ.

ಆ) ಮೇಲ್ಕಾಂಡ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ಯಾವ ಯಾವ ಯೋಜನೆಗಳಲ್ಲಿ ಈ ವರ್ಷ ಖರ್ಚು ಮಾಡಲಾಗಿದೆ.

ಇ) ಅಂತಿಮ ಹಂತಗಳಲ್ಲಿರುವ ನೀರಾವರಿ ಯೋಜನೆಗಳಾವುವು ಮತ್ತು ಈ ಯೋಜನೆಗಳನ್ನು ಈ ವರ್ಷದಲ್ಲಿಯೇ ಪೂರೈಸಲು ಬೇಕಾದ ಹಣವನ್ನು ಸರ್ಕಾರದವರು ಒದಗಿಸಲು ಕೈ ಗೊಂಡ ಕ್ರಮ ಗಳೇನು ?

ಉತ್ತರ : ಶ್ರೀ ಎಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮತ್ತು ಆ) ಯೋಜನಾವಾರು ವಿವರಣೆಗಳನ್ನು ಲಗತ್ತಿಸಲಾಗಿರುವ ವಿವರಣಾ ಪಟ್ಟಿಯ 3ನೇ ಮತ್ತು 4ನೇ ಕಾಲಂಗಳಲ್ಲಿ ಸೂಚಿಸಲಾಗಿದೆ. (ಈ ಕೆಳಗೆ ಕೊಡಲಾಗಿದೆ)

Statement to accompany replies to Starred I A. Question No 627 by Sri P Ramdev, M L.A.

Sl. No.	Name of the Project	Budget grant for 83–84	Expenditure upto December 1983
1	2	3	4
I	**Major Projects :**		
1.	Upper Krishna Stage I	5060	3191.05
2.	Ghataprabha Stage III	800	462.33
3.	Malaprabha	1100	893.64
4.	Bennithora	25	21 03
5.	Bhadra	200	144.00
6.	(a) Tungabhadra I.B.C.	200	148.92
	(b) Tungabhadra R.B. L.L.C.	30	36.52

	(c) Tungabhadra R.B. H.L.C.	II 15	27.67
7.	Karanja	300	214 32
8.	Harangi	975	562.70
9.	Hemavathy	2000	1414 21
10.	Kabini	880	644.12
11.	K.R.S. R.B.C. (Varuna)	220	131.34
12.	Yagachi	25	0.12
13.	Varahi Stage I	50	15.12
14.	Dudhganga	1	—
15.	Modernisation of K R.S.	200	90.13
16.	Modernisation of T.B P.	2.5	10.18
17.	Modernisation of Bhadra	5	—
18.	Improvement to T.B.P.	2.5	2.92
	Total (Major)	12091	8010 32

1	2	3	4
II.	**Medium Projects :**		
1.	Amaraja	75	21.55
2.	Upper Mullamari	72	34.89
3.	Lower Mullamari	60	20 13
4	Soudagar	90	59 97
5.	Hirehalla	15	18 51
6.	Maskinala	40	8.01
7.	F.C. to Panikere	22	22.00
8.	Chulkinala	50	7.39
9.	Manchanabele	80	62 05
10.	Taraka	42	42.53
11.	Votehole	157	204.70
12.	Teetha	20	21.18
13.	Arkavathy	40	3 51
14.	Chicklihole	125	66.60
15.	Iggalur	70	20.89
16.	N Ilur Amanikere	80	32.61
17.	Uduthorehalla	15	8.30
18.	Chandrampalli	2	0.13
19.	Hagaribommanahalli	5	3.48
20.	Narihalla	6	4.27
21.	Rajolibunda Diversion	1	2.72
22.	Chikkahole (reconstruction)	1	0.43
23.	Suvarnavathy	1	0.06
24.	Harinala	1	0.47
	Total : (Medium)	1070	666 38
	Total : (Maj. & Med)	13161	8676.70

ಇ) ಸೌದಾಗರ್, ತೀತಾ ಮತ್ತು ನಲ್ಲೂರು ಅಮಾನಿ ಕೆರೆ ಯೋಜನೆಗಳನ್ನು 1985ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಈ ಯೋಜನೆಗಳಿಗೆ ಈ ವರ್ಷ ಹಣವನ್ನು ಒದಗಿಸಲಾಗಿದೆ.

ಶ್ರೀ ಪಿ. ರಾಮ್‌ದೇವ್ —ಸ್ವಾಮಿ, ಒಟ್ಟು 24 ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಒಟ್ಟು 86 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೀರಿ ಅದನ್ನು ನೋಡಿದರೆ ಕೆಲಸ ಬಹಳ ನಿಧಾನವಾಗುತ್ತಾ ಇರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಏನು ಅನ್ನುವುದನ್ನು ಹೇಳುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.—ಕೆಲಸ ಏನೂ ನಿಧಾನವಾಗಿ ಆಗುತ್ತಾ ಇಲ್ಲ. ಆರ್ಥಿಕ ವರ್ಷದಲ್ಲಿ ಇದ್ದಂಥಾ ಹಣವನ್ನು ಪೂರ್ತಾ ಏರ್ಪಾಡು ಮಾಡಿದ್ದೇವೆ ಅಷ್ಟೆ.

ಶ್ರೀ ಕೆ. ಹೆಚ್. ರಂಗನಾಥ್. — 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಆಳವಡಿಸಿದ ಈ ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳು ಏನು ಇವೆ ಇದರಲ್ಲಿ ಹಲವಾರು ಯೋಜನೆಗಳ ಕೆಲಸಗಳು ನಡೆಯುತ್ತಾ ಇಲ್ಲ. ಇನ್ನೂ ಕೆಲವು ಯೋಜನೆಗಳ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೀರಿ. ಯಾವುದೂ ಕೂಡ ವಾಯಿದೆ ಒಳಗಾಗಿ ಕೆಲಸಗಳು ಮುಗಿದಿಲ್ಲ. ಈ ಬಗ್ಗೆ ಸರ್ಕಾರ ಏನು ವಿಚಾರ ಮಾಡುತ್ತಾ ಇದೆ ? ಅಲ್ಲದೆ ಕೃಷ್ಣ ವ್ಯಾಲಿಯಲ್ಲಿರತಕ್ಕಂಥಾ ಒಂದು ತೊಟ್ಟು ನೀರನ್ನೂ ಕೂಡ ಬಿಡದಂತೆ ಬಳಸಿಕೊಳ್ಳುವ ಬಗ್ಗೆ ಸರ್ಕಾರ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಏನಾದರೂ ಹಾಕಿಕೊಂಡಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಕೆ. ಹೆಚ್. ರಂಗನಾಥ್‌ರವರಿಗೂ ಗೊತ್ತಿದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಸಣ್ಣ ನೀರಾವರಿ ಮತ್ತು ದೊಡ್ಡ ನೀರಾವರಿ ಕೆಲಸಗಳನ್ನು ಶುರು ಮಾಡಿದ್ದು ನಿಜ. ಹಣದ ಪರಿಸ್ಥಿತಿ ತಮಗೂ ಗೊತ್ತಿದೆ, ನಾನು ಏನು ಹೇಳಬೇಕಾಗಿಲ್ಲ. ಆ ಒಂದು ಪ್ಲಾನ್‌ನಂತೆ ಆ ಕೆಲಸಗಳನ್ನು ಮುಗಿಸಬೇಕು ಎನ್ನುವ ಅಭಿಪ್ರಾಯ ಸರ್ಕಾರಕ್ಕೂ ಇದೆ. ತಮಗೆ ಹೇಳಬೇಕಾದರೆ ಪ್ರತಿ ವರ್ಷವೂ ಕೂಡ ಎಸ್ಕ್ಯಲೇಷನ್ ಆಗುತ್ತಾ ಇರುವುದರಿಂದ ಎಲ್ಲಾ ಪ್ರಾಜೆಕ್ಟ್ ಕೆಲಸಗಳೂ ಸ್ವಲ್ಪ ಹಿಂದಕ್ಕೆ ಬೀಳುತ್ತವೆ. ಆದರೆ ಯಾವುದೇ ಕಾರಣದಿಂದಲೂ ಕೂಡ ಆ ಕೆಲಸಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮಲ್ಲಿರತಕ್ಕಂಥ ಹಣವನ್ನು ಆ ಸಂದರ್ಭದಲ್ಲಿ ವಿತರಣೆ ಮಾಡುವಾಗ ಕೆಲಸ ಮಾಡುವ ವೇಗ ಕಡಿಮೆಯಾಗುತ್ತಿದೆಯೇ ವಿನಹ ಆ ಕೆಲಸವನ್ನು ನಿಲ್ಲಿಸುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ತಮಗೆ ಹೇಳಬೇಕಾದರೆ ಆಂಧ್ರ ಪ್ರದೇಶದವರು ತಾವು ತೆಗೆದುಕೊಂಡಂಥ ಕೆಲಸಗಳನ್ನು ಸ್ಥಗಿತಗೊಳಿಸಿ ನಾಗಾರ್ಜುನ ಸಾಗರ ಕಟ್ಟಲು ಆದ್ಯತೆ ಕೊಟ್ಟು ತೀವ್ರಗತಿಯಲ್ಲಿ ಆ ಕೆಲಸವನ್ನು ಮುಗಿಸಿದರು. ಹಾಗೆಯೇ ನಮ್ಮಲ್ಲಿರುವ ನೀರಾವರಿ ಯೋಜನೆಗಳ ಬಗ್ಗೆ ಒಂದು ಸ್ಪೆಷಲ್ ಪ್ಲಾನ್ ಹಾಕಿ, ನೀರಾವರಿ ಪ್ರದೇಶಗಳನ್ನು ಬೆಳೆಸುವುದಕ್ಕೆ ಮತ್ತು ಅದರಲ್ಲಿ ಒಂದು ಪೊಟೆನ್ಷಿಯಲ್ ಕ್ರಿಯೇಟ್ ಮಾಡುವುದಕ್ಕೆ ಒಂದು ಸ್ಪೆಷಲ್ ಪ್ಲಾನ್ ಹಾಕ ಇರತಕ್ಕಂಥಾ ಕೆಲಸಗಳನ್ನು ಸ್ಥಗಿತ ಮಾಡಿ ಈ ನೀರಾವರಿಗೆ ಆದ್ಯತೆ ಕೊಡುವ ಹಾಗೆ ಸರ್ಕಾರ ಒಂದು ವ್ಯವಸ್ಥಿತವಾದ ಕಾರ್ಯಕ್ರಮ ಹಾಕಿಕೊಳ್ಳುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಅನುತ್ಪಾದಕ ವೆಚ್ಚವನ್ನು ನಿಲ್ಲಿಸಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಒಪ್ಪಿದರೆ ನಾನು ಅದನ್ನು ಮಾಡುವುದಕ್ಕೆ ತಯಾರಾಗಿದ್ದೇನೆ ಸದನದ ಅಭಿಪ್ರಾಯ ಆ ರೀತಿ ಇರುವುದಾದರೆ ಮತ್ತು ಅದಕ್ಕೆ ಒಂದು ಸ್ಟೂರ್ತಿ ಕೊಡುವುದಾದರೆ ಒಳ್ಳೆಯದು. ನಾನು ಎಲ್ಲಾ ರಾಜಕೀಯ ಪಕ್ಷದವರನ್ನು ಸೇರಿಸಿ ಇದರ ಬಗ್ಗೆ ಒಂದು ಸಮಿತಿ ಮಾಡಬೇಕೆಂದು ಹಿಂದೆ ನಿರ್ಣಯ ಮಾಡಿದ್ದೆ. ಆದರೆ ಕಾರಣಾಂತರದಿಂದ ಅದು ಆಗಲಿಲ್ಲ. ಅದು ನಿಮಗೂ ಗೊತ್ತಿದೆ. ಯಾವುದೇ ಒಂದು ಪ್ರಾಜೆಕ್ಟ್ ಅನ್ನು ಕಾನ್‌ಸನ್‌ಟ್ರೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ again it will attract a lot of criticism on this issue.

ಶ್ರೀ ಪಿ. ರಾಮ್‌ದೇವ್.— ಸ್ವಾಮಿ, ಎಸ್ಟಿಮೇಟ್ ಕಮಿಟಿಯಲ್ಲಿ ನಾವು ಈ ಒಂದು ಪ್ರಶ್ನೆಯನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಮೊದಲೇ ಹೇಳಿದ ಹಾಗೆ ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಏನೇನು ಕೆಲಸಗಳು ಮಾಡಬೇಕೆಂದು ಇದೆಯೋ ಅದಕ್ಕೆ ನಮ್ಮ ನಮ್ಮ ಸಹಕಾರ ಕೊಟ್ಟೇ ಕೊಡುತ್ತೇವೆ. ಈ ನೀರಾವರಿ ಪ್ರದೇಶಕ್ಕೆ ಹೆಚ್ಚು ಆದ್ಯತೆ ಕೊಟ್ಟ ಈ ಬಗ್ಗೆ ಒಂದು ಸ್ಪೆಷಲ್ ಪ್ಲಾನ್ ಮಾಡಿ ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಅದು ಒಂದು ದೊಡ್ಡ ಸಮಸ್ಯೆ. ಅದಕ್ಕೆ ಮಾನ್ಯ ಕೆ. ಹೆಚ್. ರಂಗನಾಥ್‌ರವರ ಸಹಕಾರವೂ ಬೇಕು, ಮಾನ್ಯ ಎನ್. ಹುಚ್ಚಮಾಸ್ತಿಗೌಡರ ಸಹಕಾರವೂ ಬೇಕು. ಈ ಸಂದರ್ಭದಲ್ಲಿ ನಾನು ಪಕ್ಷದ ಹೆಸರನ್ನು ಬಳಸುವುದಕ್ಕೆ ಹೋಗುವುದಿಲ್ಲ ಆದರೆ ಆ ಕೆಲಸಗಳನ್ನು ಮಾಡಬೇಕಾದರೆ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ಜವಾಬ್ದಾರಿಯನ್ನು ನಾವು

ಹೊರಬೇಕಾಗುತ್ತದೆ. ಆ ಬಗ್ಗೆ ನಾವು ವಿಫಲರಾಗಿದ್ದೇವೆ. ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಇವತ್ತು ಮೇಜರ್ ಇರಿಗೇಷನ್ ಎಲ್ಲವನ್ನೂ ತೆಗೆದುಕೊಳ್ಳಬೇಕಾದರೆ 1,600 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮೀಡಿಯಂ ಇರಿಗೇಷನ್ ತೆಗೆದುಕೊಳ್ಳಬೇಕಾದರೆ ಅದಕ್ಕೆ 110 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಒಟ್ಟು 1710 ಕೋಟಿ ರೂಪಾಯಿಗಳು ಬೇಕಾಗುತ್ತದೆ ಈವೊತ್ತು ನಾವು ತೆಗೆದುಕೊಂಡಿರುವ ಕೆಲಸಗಳಿಗೆ ಖರ್ಚು ಮಾಡುತ್ತಾ ಇರುವುದು 130-140 ಕೋಟಿ ರೂಪಾಯಿಗಳು. ಇದೇ ರೀತಿಯಾಗಿ ಕೆಲಸ ಮಾಡಿದರೆ ಇನ್ನೂ 13-14 ವರ್ಷಗಳ ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈವೊತ್ತು ಒಂದು ರಸ್ತೆ ಕೆಲಸ ಮಾಡುವುದನ್ನು ನಿಲ್ಲಿಸಿದರೆ ಆಸ್ಪತ್ರೆ ಕೊಡುವುದನ್ನು ಕಡಿಮೆ ಮಾಡಿದರೆ ಅನೇಕ ಶಾಸಕರಿಗೆ ಅಸಮಾಧಾನವಾಗುತ್ತದೆ. ಅಲ್ಲದೆ ಒಂದು ಭಾಗದಲ್ಲಿ ಒಂದು ಕೆಲಸ ತೆಗೆದುಕೊಂಡು ಇನ್ನೊಂದು ಭಾಗದಲ್ಲಿ ಆ ಕೆಲಸವನ್ನು ತೆಗೆದುಕೊಳ್ಳದೆ ಹೋದರೆ ಆ ಭಾಗದ ಶಾಸಕರಿಗೆ ಸಮಾಧಾನವಾಗುವುದಿಲ್ಲ. ಇದನ್ನೆಲ್ಲಾ ನಾವು ನೋಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಹೇಳುವುದು ಏನೆಂದರೆ ಗೇಣಿಗೊಂದು ಸ್ಕೂಲಿಗೆ ಕೊಟ್ಟಿದ್ದಾರೆ, ಗೇಣಿಗೆ ಒಂದು ಆಸ್ಪತ್ರೆ ಕೊಟ್ಟಿದ್ದಾರೆ, ಯಾವ ರೀತಿಯಾದರೂ ಒಂದು ಪ್ಲಾನ್, ಪ್ರೈಮ್ ಗ್ರಾಂ ಇಲ್ಲದೆ ಅವರವರ ಮನಸ್ಸಿಗೆ ಬಂದಂತೆ ಆದನ್ನು ಕೊಟ್ಟಿರುವುದರಿಂದ ರೆಕರಿಂಗ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಗಿದೆ. ಆದುದರಿಂದ ಆದನ್ನೆಲ್ಲಾ ಕಡಿಮೆ ಮಾಡಿ ಈ ನೀರಾವರಿ ಕೆಲಸಕ್ಕೆ ಪೂರಕ್ಕೆ ಹಣ ಹೆಚ್ಚು ಮಂಜೂರು ಮಾಡಬಾರದು ?

ಒಬ್ಬ ಮಾನ್ಯ ಸದಸ್ಯರು.—ಇದಕ್ಕೆ ಬೇಕಾದರೆ ಅರ್ಧ ಗಂಟೆ ಡಿಸ್ಕಷನ್ ಇಡಿ. ಮಾತನಾಡೋಣ.

(ಉತ್ತರ ಇಲ್ಲ)

ಶ್ರೀ ಎನ್. ಹಚ್ಚಮಾಸ್ತಿಗೌಡ.—ಮಾನ್ಯ ಕೆ. ಹೆಚ್. ರಂಗನಾಥ್‌ರವರು ಕೇಳಿದ ಪ್ರಶ್ನೆ ಮಾರ್ಮಿಕವಾದ ಪ್ರಶ್ನೆ. ನಾನು ಕೇಳುವುದು ಇಷ್ಟೆ. ಈಗ ನಾವು ಕೊಡತಕ್ಕಂಥಾ ಹಣವನ್ನು 3 ತಿಂಗಳೊಳಗೆ ಖರ್ಚು ಮಾಡುವುದಕ್ಕೆ ಸಾಧ್ಯವೇ ? ಇದಕ್ಕಿಂತಲೂ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಖರ್ಚು ಮಾಡುವುದಕ್ಕೆ ಸಾಧ್ಯ ಇದ್ದರೆ ನಾವು ಈ ಹಣವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ—ಆ ಬಗ್ಗೆ ಹೇಳಬೇಕಾದರೆ ಈ ವರ್ಷ ಸಾಧ್ಯವಾದ ಹಣವನ್ನು ಖರ್ಚು ಮಾಡುತ್ತೇವೆ. ಆದರೆ ಇದಕ್ಕಿಂತಲೂ ಹೆಚ್ಚು ಹಣ ಖರ್ಚು ಮಾಡಬೇಕು ಎಂದರೆ ಅಷ್ಟು ಹೆಚ್ಚು ಹಣವನ್ನು ಒದಗಿಸುವ ಪರಿಸ್ಥಿತಿಯಲ್ಲಿ ನಾವು ಇಲ್ಲ.

ಶ್ರೀ ಬಾಪೂಗೌಡ.— ಸ್ವಾಮಿ, ಕಾವೇರಿ ಬೇಸಿನ್ ಯೋಜನೆಗಳಿಗೆ ಸ್ವಲ್ಪ ಹಣ ಖರ್ಚು ಮಾಡಿದ್ದೀರಿ. ಹಾರಂಗಿ ಹೇಮಾವತಿ, ಮಲಪ್ರಭಾ, ಘಟಪ್ರಭಾ ಈ ಯೋಜನೆಗಳಲ್ಲೂ ಕೂಡ ಸ್ವಲ್ಪ ಹೆಚ್ಚು ಕೆಲಸ ನಡೆದಿದೆ. ಕೃಷ್ಣ ಯೋಜನೆಯಲ್ಲಿ ಕಾಲು ಭಾಗದಷ್ಟು ಕೆಲಸ ನಡೆದಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇವೆಲ್ಲಾ ಯೋಜನೆಗಳ ಕೆಲಸಗಳನ್ನು ಪೂರ್ತಿ ಮಾಡಬೇಕಾದರೆ ಒಟ್ಟು 1710 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅವರು ಈಗ ಖರ್ಚು ಮಾಡುತ್ತಾ ಇರತಕ್ಕಂಥಾ ಒಂದು ಸ್ಪೀಡ್ ನೋಡಿದರೆ ಈಗ ಅವಕ್ಕೆಲ್ಲಾ 130-140-150 ಕೋಟಿ ರೂಪಾಯಿಗಳಂತೆ ಹಣವನ್ನು ಒದಗಿಸುತ್ತಾ ಇದ್ದಾರೆ.

ಶ್ರೀ ಬಾಪೂಗೌಡ.— ಇದನ್ನು ಸರಿಪಡಿಸುವುದಕ್ಕೆ ಇನ್ನಾದರೂ ಜಾಗೃತಿಕ ಬ್ಯಾಂಕಿನಿಂದ ಹಣವನ್ನು ಪಡೆದು, ನೆರವು ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಈ ಆಲಾಪಿಯ ಮೇಲೆ ಬೇಡಿಕೆಗಳು ಬಂದಂತಹ ಕಾಲದಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕೆ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ, ಅದನ್ನು ಸಂಪೂರ್ಣವಾಗಿ ಸ್ವೀಕಾರ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಈಗ 120 ಕೋಟಿ ರೂಪಾಯಿಗಳಲ್ಲಿ ಅಪ್ಪರ್ ಕೃಷ್ಣಾ ಯೋಜನೆಗೆ ಒಟ್ಟು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಾ ? ಇನ್ನು ಮೂರು ತಿಂಗಳಲ್ಲಿ ಎಷ್ಟು ಹಣ ಖರ್ಚು ಮಾಡತಕ್ಕದ್ದಿದೆ ? ಈಗಾಗಲೇ 130 ಕೋಟಿ ರೂಪಾಯಿಗಳಲ್ಲಿ ಕೇವಲ 86 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ, ಇನ್ನೂ ಸುಮಾರು 40-45 ಕೋಟಿ ರೂಪಾಯಿಗಳು ಹಾಗೆಯೇ ಇದೆ. ಈ ಹಣವನ್ನು ಮೂರು ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಿದೆಯೇ ?

ಇನ್ನು ಎರಡನೆಯದಾಗಿ, ಈಗಾಗಲೇ ಅಪ್ಪರ್ ಕೃಷ್ಣಾ ಯೋಜನೆಗೆ 125 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಇದು ಡಿಸೆಂಬರ್ ತಿಂಗಳವರೆಗೆ ಕೊಟ್ಟಂಥಹ ವೆಚ್ಚದ ಪಟ್ಟಿ. ಇನ್ನು ಮೂರು ತಿಂಗಳಲ್ಲಿ ಉಳಿದ ಹಣವನ್ನು ಖರ್ಚು ಮಾಡುತ್ತೇವೆ. ಇವರ ಜೊತೆಗೆ ಅಪ್ಪರ್ ಕೃಷ್ಣಾ ಯೋಜನೆಗೆ ಇಟ್ಟಂಥ ಹಣ 50 ಕೋಟಿ ರೂಪಾಯಿಗಳು. ಈಗಾಗಲೇ 43 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಉಳಿದ ಹಣವನ್ನು ಸೇವಿಂಗ್ಸ್ ಇಲ್ಲದೆ ಖರ್ಚು